**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ**
**ಕೆ.ಆರ್.ನಗರ**
**ಸಿ.ಸಿ.1237/2016**

**ಪಿಡಬ್ಲೂ-2**

**ದಿನಾಂಕ 17-02-2020 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**
**ಪಾಟೀ ಸವಾಲು ಶ್ರೀ ಟಿ ಜಿ ವಕೀಲರಿಂದಃ ಆರೋಪಿ ಪರ ವಕೀಲರುಃ**

ನಮ್ಮ ಊರಿನಲ್ಲಿ ಇರುವ ಸಬ್ ರಿಜಿಸ್ಟ್ರಾರ್ ಇವರ ಕಛೇರಿಯಲ್ಲಿ ಕೆಲಸ ಮಾಡುವ ವಸಂತ ಇವರ ತಮ್ಮ ಶಿವಕುಮಾರ್ ಎನ್ನುವವರು ಇದ್ದಾರೆ ಆದರೆ ಅವರ ಪರಿಚಯ ನನಗೆ ಇಲ್ಲ. ಸದರಿ ಶಿವಕುಮಾರ್ ಹಾಗೂ ದಿವ್ಯಾ ಇವರ ಮದುವೆ ನಿಶ್ಚಯ ಆಗಿತ್ತು ಎಂದರೆ ಗೊತ್ತಿಲ್ಲ.

ನನ್ನ ಮಾವನ ಮಗ ಚಾಸಾ 1 ಇವರು ಸದರಿ ದಿವ್ಯಾಳನ್ನು ತನ್ನೊಂದಿಗೆ ಮದುವೆಯಾಗಲು ಒತ್ತಾಯ ಮಾಡುತ್ತಿದ್ದ ಎಂದರೆ ನನಗೆ ಗೊತ್ತಿಲ್ಲ. ಈ ರೀತಿ ದಿವ್ಯಾ ಇವರ ಮದುವೆ ನಿಶ್ಚಯ ಆದ ನಂತರ ಚಾಸಾ 1 ರವರು ಶಿವಕುಮಾರ್ ಇವರಿಗೆ ಕೊಲೆ ಬೆದರಿಕೆ ಹಾಕುವಲ್ಲಿ ನನ್ನ ಪಾತ್ರ ಸಹ ಇತ್ತು ಎಂದರೆ ಸರಿಯಲ್ಲ.

ಆರೋಪಿಯ ಸಂಬಂದಿಕರೆಲ್ಲ ಸೇರಿ ನನಗೂ ಹಾಗೂ ಚಾಸಾ 1 ರವರಿಗೆ ಸದರಿ ದಿವ್ಯಾರವರ ಮದುವೆ ನಿಶ್ಚಯ ಆಗಿದೆ ಈ ರೀತಿ ತೊಂದರೆ ನೀಡಬೇಡಿ ಎಂದು ಹೇಳಿ ತಿಳಿ ಹೇಳಿದ್ದರು ಎಂದರೆ ಸರಿಯಲ್ಲ. ನಾನು ಹಾಗೂ ಚಾಸಾ 1 ರವರು ಈ ರೀತಿ ನೀಡಿದ ಕಿರುಕಳದಿಂದ ದಿವ್ಯಾ ಇವರ ಮದುವೆ ಮುರಿದು ಬಿತ್ತು ಎಂದರೆ ನನಗೆ ಗೊತ್ತಿಲ್ಲ.

ನಾನು ಹಾಗೂ ಚಾಸಾ 1 ರವರು ಆರೋಪಿ ಇವರು ಸದರಿ ದಿವ್ಯಾಳ ಮದುವೆಯನ್ನು ಚಾಸಾ 1 ರವರೊಂದಿಗೆ ಮಾಡಿಸಿ ಕೊಡಲಿಲ್ಲ ಎಂದು ಹೇಳಿ ಅವರ ವಿರುದ್ದ ಸುಳ್ಳು ದೂರನ್ನು ದಾಖಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ನಾನು ನನ್ನ ಹೇಳಿಕೆಯಲ್ಲಿ ನನಗೆ ಸೇರಿದ ಎಷ್ಟು ಜಮೀನು ಇದೆ ಅದರಲ್ಲಿ ಎಷ್ಟು ಮರಗಳು ಬೆಳೆದಿವೆ, ಜಮೀನಿನ ಸರ್ವೇ ನಂಬರ್ಗಳನ್ನು ತಿಳಿಸಿರುವುದಿಲ್ಲ. ಪೋಲೀಸರು ನಮ್ಮ ಮನೆಯಲ್ಲಿ ಮಹಜರ್ಗೆ ನಮ್ಮ ಸಹಿಯನ್ನು ಪಡೆದು ನಮ್ಮ ವಿಚಾರಣೆ ಮಾಡಿರುವುದಿಲ್ಲ ಎಂದರೆ ಸರಿ.

ನಾನು ಇದೇ ಮೊದಲನೆ ಬಾರಿಗೆ ಹೇಳಿಕೆಯನ್ನು ನೀಡುತ್ತಿದ್ದು ಇನ್ಯಾರ ಮುಂದೆಯು ಹೇಳಿಕೆಯನ್ನು ನೀಡಿರುವುದಿಲ್ಲ ಎಂದರೆ ಸಾಕ್ಷಿ ಈ ಹಿಂದೆ ಸಾಕ್ಷಿ ಮುಖ್ಯ ವಿಚಾರಣೆಯಲ್ಲಿ ಹೇಳಿರುತ್ತೇನೆ ಎಂದು ನುಡಿಯುತ್ತಾರೆ. ಮೂಮಾ 1 ಮತ್ತು 2 ಗಳನ್ನು ಸದರಿ ಪ್ರಕರಣ ಬಲಪಡಿಸಲು ಹಾಜರುಪಡಿಸಿದ ವಸ್ತುಗಳು ಎಂದರೆ ಸಾಕ್ಷಿ ಸದರಿ ಹಗ್ಗ ಮತ್ತು ಮಚ್ಚು ನಮ್ಮ ಮನೆಯಲ್ಲಿಯೇ ಇತ್ತು ಹಾಗೂ ಅವು ನಮ್ಮವೇ ಎಂದು ನುಡಿಯುತ್ತಾರೆ.

ಮೂಮಾ 1 ಹಾಗೂ 2 ರ ಮೇಲೆ ಚೀಟಿ ಅಂಟಿಸಿ ನನ್ನ ಸಹಿಯನ್ನು ಪೋಲೀಸರು ಪಡೆದಿರುವುದಿಲ್ಲ. ನಾನು ಹೇಳಿದ ಹಾಗೇ ಯಾವುದೇ ಗಲಾಟೆ ಆಗಿರುವುದಿಲ್ಲ ಆರೋಪಿ ಯಾವುದೇ ಅಪರಾದ ಮಾಡಿರುವುದಿಲ್ಲ ಆರೋಪಿ ಇವರು ದಿವ್ಯಾಳ ಮದುವೆಯನ್ನು ಚಾಸಾ 1 ರವರೊಂದಿಗೆ ಆಗುವುದನ್ನು ತಪ್ಪಿಸಿದ್ದರಿಂದ ಸದರಿ ಸುಳ್ಳು ಪ್ರಕರಣವನ್ನು ಅವರ ವಿರುದ್ದ ದಾಖಲಿಸಿರುತ್ತೆನೆ ಎಂದರೆ ಸರಿಯಲ್ಲ.

ಆರೋಪಿ ಇವರು ನನಗೆ ಅವಾಚ್ಯ ಶಬ್ದಗಳಿಂದೆ ಬೈದಿರುವುದಿಲ್ಲ ಹಾಗೂ ಹಲ್ಲೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಚಾಸಾ 3 ಮತ್ತು 4 ನನ್ನ ಸಂಬಂದಿಕರು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಅವರು ನನ್ನ ಸ್ನೇಹಿತರು ಎಂದು ನುಡಿಯುತ್ತಾರೆ. ಸದರಿಯವರು ನನ್ನ ಸ್ನೇಹಿತಿರಾದ್ದರಿಂದ ಅವರನ್ನು ಸಾಕ್ಷಿದಾರರನ್ನಾಗಿ ಮಾಡಿಸಿದ್ದೇನೆ ಎಂದರೆ ಸಾಕ್ಷಿ ಚಾಸಾ 4 ರವರೇ ನಮ್ಮನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದು ಎಂದು ನುಡಿಯುತ್ತಾರೆ. ಚಾಸಾ 1 ರವರು ಬೈಕಿನಿಂದ ಬಿದ್ದು ಗಾಯ ಮಾಡಿಕೊಂಡಿದ್ದರೂ ಸಹ ನಾವು ಆರೋಪಿ ಇವರು ಹಲ್ಲೆ ಮಾಡಿದ್ದರಿಂದ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆ</u> - ಇರುವುದಿಲ್ಲ.

**(ನನ್ನ ಉಕ್ತ ಲೇಖನದ ಮೇರೆಗೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)**

ಓ ಹೇ ಕೇ ಸ ಇದೆ ಎಂ

(ಗಾಯತ್ರಿ)

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು,

ಮತ್ತು ಪ್ರದನ್ಯಾದಂ., ಕೆ.ಆರ್.ನಗರ